ಓ ಎಸ್ ನಂ. 13/2019

ಪಿಡಬ್ಲ್ಯೂ: 1

**ದಿಃ 01-12-2020** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು , ಅದನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ.

**<u>ಪಾಟೀ ಸವಾಲುಃ</u>** 2 ನೇ ಪ್ರತಿವಾದಿ ಪರ ಶ್ರೀ. ಹೆಚ್.ಎಂ.ವಿ. ವಕೀಲರಿಂದಃ-

ಈ ದಾವೆಯನ್ನು ಯಾರ ವಿರುದ್ಧ ಹಾಕಿದ್ದಿರಿ ಎಂದರೆ 2 ನೇ ಪ್ರತಿವಾದಿ ಸದಾಶಿವಪ್ಪ ಮತ್ತು ಚಂದ್ರಮ್ಮ ಲೋಕೇಶಪ್ಪ, ಲತ ಮತ್ತು ಇನ್ನಿತರರ ವಿರುದ್ಧ ದಾಖಲಿಸಿದ್ದೇನೆ, ಯಾವ ಯಾವ ಆಸ್ತಿಯ ವಿರುದ್ಧ ದಾಖಲಿಸಿದ್ದಿರಿ ಎಂದರೆ ಒಟ್ಟು ಕುಟುಂಬದ ಆಸ್ತಿಯ ವಿರುದ್ಧ ದಾಖಲಿಸಿದ್ದು ಇದೆ. ತಮ್ಮ ಅಜ್ಜನ ಹೆಸರು ಹಾಲಪ್ಪ ಎಂದರೆ ಸರಿ ಮತ್ತು ಅವರಿಗೆ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಮತ್ತು ಅದೇ ರೀತಿ ತಮ್ಮ ತಂದೆ ಶೀವರುದ್ರಪ್ಪ ಮತ್ತು ಈಶ್ವರಪ್ಪ ಇಬ್ಬರು ಗಂಡು ಮಕ್ಕಳು ಎಂದರೆ ಸರಿ . ಮತ್ತು ಶಿವಲಿಂಗಮ್ಮ ಮತ್ತು ಸಿದ್ದಮ್ಮ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ ಈಶ್ವರಪ್ಪ ಮೃತಪಟ್ಟಿದ್ದಾರೆ ಎಂದರೆ ಸರಿ. ಅವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರು ಯಾರು ಎಂದರೆ ಪಾರಮ್ಮ ಮತ್ತು ಗಂಗಮ್ಮ ಎನ್ನುತ್ತಾರೆ. ಮತ್ತು ಈಶ್ವರಪ್ಪ ಅವರಿಗೆ ಶವಲಿಂಗಮ್ಮ ಮತ್ತು ರುದ್ರಮ್ಮ ಇಬ್ಬರು ಹೆಂಡತಿಯರು ಎಂದರೆ ಸರಿ. ಶಿವಲಿಂಗಮ್ಮ ಪೋತಿಯಾಗಿದ್ದಾರೆ ಎಂದರೆ ಸರಿ ಮತ್ತು ರುದ್ರಮ್ಮ ಜೀವಂತವಾಗಿದ್ದಾರೆ. ಶೀವರುದ್ರಪ್ಪ ಮತ್ತು ಈಶ್ವರಪ್ಪ ಅವರ ಆಸ್ತಿಗೆ ಸಂಬಂಧಪಟ್ಟಂತೆ ಬಹಳ ಹಿಂದೆ ಒಟ್ಟು ಕುಟುಂಬದ ಆಸ್ತಿಗಳು ವಿಭಾಗವಾಗಿವೆ ಎಂದರೆ ಇಲ್ಲ. ರುದ್ರಮ್ಮ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಇಲ್ಲ. ಈಶ್ವರಪ್ಪನವರಿಗೆ ಶಿವಲಿಂಗಮ್ಮ ಮತ್ತು ರುದ್ರಮ್ಮ ಇಬ್ಬರಿಗೂ ಮಕ್ಕಳಿದ್ದಿಲ್ಲ ಎಂದರೆ ಇಲ್ಲ. ಆದ್ದರಿಂದ 2 ನೇ ಪ್ರತಿವಾದಿ ಸದಾಶಿವಪ್ಪರನ್ನು ದತ್ತು ಪಡೆದಿದ್ದರು ಎಂದರೆ ಇಲ್ಲ. ಸದಾಶಿವಪ್ಪರನ್ನು ದತ್ತು ಪಡೆದುಕೊಂಡಿದ್ದರೂ ಸಹ ಅವರ ಸ್ವಯಾರ್ಜಿ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ದಿಃ

**<u>ಮುಂದುವರೆದ ಪಾಟೀ ಸವಾಲುಃ</u>** ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚನ್ನಗಿರಿ.